ನಗೆದಿನ ವಿಶೇಷ



# ರಾಂಗ್ ನಂಬರ್

**ಮೆಂಟಲ್ ಆಸ್ಪತ್ರೆ ಹಾಗೂ ನಮ್ಮ ಮನೆಯ ಫೋನ್ ನಂಬರಿನಲ್ಲಿ ಸಾಮ್ಯತೆಯಿತ್ತೇನೋ, ರಾಂಗ್ ನಂಬರಿನ ಹಾವಳಿಯಂತೂ ಇದ್ದೇ ಇತ್ತು. ಕೆಲವರು ಅಪಾಯಿಂಟ್‌ಮೆಂಟ್ ಅಷ್ಟೇ ಕೇಳಿದರೆ, ಇನ್ನೂ ಕೆಲವರು ಗಾಬರಿಯಿಂದ ಸಮಸ್ಯೆಗಳನ್ನು ಹೇಳಿಕೊಳ್ಳಲು ಶುರು ಮಾಡುತ್ತಿದ್ದರು.**

■ ಲತಾ ಹೆಗಡೆ
ಕಲೆ: ಸಂತೋಷ್ ಸಸಿಹಿತ್ಲು

ಸುಮಾರು ಹದಿನೈದು ವರ್ಷಕ್ಕೂ ಮೊದಲು ಲ್ಯಾಂಡ್‌ಲೈನ್ ಫೋನಿನದ್ದೇ ಪ್ರಾಬಲ್ಯ, ಮೆರೆತವಿತ್ತು. ಯಜಮಾನರು ಟೆಲಿಫೋನ್ ಕಚೇರಿ ಉದ್ಯೋಗಿಯಾದ್ದರಿಂದ ಬಿಟ್ಟಿ ಫೋನಿನ ಸವಲತ್ತೂ ಇದ್ದದ್ದರಿಂದ, ಸಂಬಂಧಿಕರು, ಸ್ನೇಹಿತರು, ಪರಿಚಯಸ್ಥರೆಲ್ಲ ಮಾತಾಡುವುದಿದ್ದಲ್ಲಿ ಕಾಲ್ ಮಾಡಿ ಇಟ್ಟುಬಿಡುತ್ತಿದ್ದರು! ಅದು ಕಾಲರ್ ಐಡಿ ಆದ್ದರಿಂದ ಕರೆ ಯಾರದ್ದೆಂದು ತಿಳಿದು ಪುನಃ ಫೋನಾಯಿಸುತ್ತಿದ್ದೆ. ಕೆಲವು ಬಾರಿ ಯಾರದ್ದೋ ಎಂದು ಅವಸರದಲ್ಲಿ ಕೆಲಸ ಬಿಟ್ಟು ಓಡಿಹೋಗಿ ಇನ್ನೇನು ರಿಸೀವರ್ ಕೈಗೆತ್ತಿಕೊಳ್ಳುವಷ್ಟರಲ್ಲಿ ಕಾಲ್ ಕಟ್ಟಾದಾಗಲಂತೂ ಕೆಟ್ಟ ಕೋಪ ಬರುತ್ತಿತ್ತು. ಆ ಸ್ಥಿತಿಯಲ್ಲಿ ಯಾರದ್ದೆಂದು ನೋಡುವುದಿದೆಯಲ್ಲ ಅದಿನ್ನೂ ರಗಳೆ.

ಸಾಲದ್ದಕ್ಕೆ ಈ ಮಿಸ್ಡ್ ಕಾಲ್ ಹಾವಳಿಯೊಟ್ಟಿಗೆ ರಾಂಗ್ ನಂಬರ್ ಹಾವಳಿಯೂ ಇದ್ದದ್ದೇ. ಅದರಲ್ಲೂ 'ಮೆಂಟಲ್ ಆಸ್ಪತ್ರೇನಾ?' ಎಂದು ಮೇಲಿಂದ ಮೇಲೆ ಬರುತ್ತಿದ್ದ ಆ ರಾಂಗ್ ನಂಬರಿನ ಕಾಟವಂತೂ ಹೊತ್ತುಗೊತ್ತಿಲ್ಲದೇ ವಕ್ಕರಿಸಿ ಕೆಲವೊಮ್ಮೆ ನಗು ತರಿಸಿದರೆ ಕೆಲವೊಮ್ಮೆ ಕೆಲಸದ ಒತ್ತಡದಲ್ಲಿ ನಮ್ಮನ್ನೇ ಮೆಂಟಲ್ಲಾಗಿಸಿ ಸಿಟ್ಟಿಂದ ಮೈ ಪರಚಿಕೊಳ್ಳುವಂತಾಗಿತ್ತು. ಆದರೆ ಊರಿಂದ ಬಂದ ವಸಂತಣ್ಣನಿಂದಾಗಿ ಅದು ಮೋಜಾಗಿ ಮಾರ್ಪಾಡಾದದ್ದು ಇಂದಿಗೂ ನಗೆಯುಕ್ಕಿಸುತ್ತದೆ. ಆ ಘಟನೆಯ ವಿವರ ಇಲ್ಲಿದೆ ನೋಡಿ.

ಅದು ಅಪರಾಹ್ನದ ಸಮಯ, ಮಧ್ಯಾಹ್ನದ ಅಡುಗೆಯಲ್ಲಿ ನಿರತಳಾಗಿದ್ದೆ. ಗ್ಯಾಸ್ ಸ್ಟೌನ ಮೂರೂ ಒಲೆಗಳು ಉರಿಯುತ್ತಿದ್ದವು, ಒಂದರಲ್ಲಿ ಕುಕ್ಕರ್ರು, ಮತ್ತೊಂದರಲ್ಲಿ ಚಪಾತಿ ಹಂಚು. ನಡುವಿನ ಸಣ್ಣ ಒಲೆಯಲ್ಲಿ ಮೊಗೇಕಾಯಿ ಹೋಳು ಬೇಯಿಸಲು ಇಟ್ಟು ಚಪಾತಿ ಲಟ್ಟಿಸುತ್ತ, ಬೇಯಿಸುತ್ತಲೇ ಜೊತೆಜೊತೆಗೆ ಸ್ತೋತ್ರ ಪಠಣದಲ್ಲೂ ತೊಡಗಿದ್ದೆ. 'ಏಕಕಾಲಕ್ಕೆ ಇಷ್ಟೆಲ್ಲಾ ತಾಂಡವ ಹೇಗ್ ಸಾಧ್ಯ, ಅದ್ಭುತ ಕಣ್ರೀ ನೀವು!' ಅಂತ ಹೊಗಳ್ತಿದ್ದೀರಾ ಅನ್ನೋದನ್ನೂ ಊಹಿಸಿಕೊಂಡೇ ಧನ್ಯವಾದಗಳನ್ನು ಅರ್ಪಿಸ್ತಿದ್ದೀನಿ ಕಣ್ರೀ! ಬಿಡೀಪ್ಪಾ ವಿಷ್ಯಕ್ಕೆ ಬರೋಣ.